ನೀರಾವರಿ ಪಂಪುಸೆಟ್ಟುಗಳಿಂದ ಪ್ರತಿ ವರ್ಷವೂ ವಿದ್ಯುತ್ ಬೇಡಿಕೆಯು ಹೆಚ್ಚಳಗೊಳ್ಳುತ್ತಿದ್ದು, ಒಟ್ಟು ವಿದ್ಯುತ್ ಬಳಕೆಯಲ್ಲಿ ಶೇ. 45 ಕ್ಕೂ ಮೀರಿದೆ. ಅದರಲ್ಲಿಯೂ ಬೇಸಿಗೆ ತಿಂಗಳುಗಳಲ್ಲಿ ನೀರಾವರಿ ಪಂಪುಸೆಟ್ಟುಗಳ ಬಳಕೆಯು ಗರಿಷ್ಠ ಪ್ರಮಾಣದಲ್ಲಿರುವುದರಿಂದ ಈ ವರ್ಗಗಳ ಗ್ರಾಹಕರಿಂದ ವಿದ್ಯುತ್ ಬಳಕೆಯು ಗರಿಷ್ಟ ಪ್ರಮಾಣವನ್ನು ಮುಟ್ಟುತ್ತದೆ. ವಿದ್ಯುತ್ ಬೇಡಿಕೆಯನ್ನು ವಿದ್ಯುತ್ ಲಭ್ಯತೆಯೊಂದಿಗೆ ಸರಿದೂಗಿಸುವ ಸಲುವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ನಿಯಮಿತ ಲೋಡ್ ಶೆಡ್ಡಿಂಗನ್ನು ನಿರ್ವಹಿಸುವುದು ಅನಿವಾರ್ಯವಾಗಿದೆ. ಅಲ್ಲದೇ ನಿಯಮಿತ ಲೋಡ್ ಶೆಡ್ಡಿಂಗನ್ನು ನಿರ್ವಹಿಸದೇ ಇದ್ದಲ್ಲಿ, ಉದ್ಭವಿಸುವ ಕಡಿಮೆ ವೋಲ್ಟೇಜ್ ಪರಿಸ್ಥಿತಿಯಿಂದಾಗಿ ಕೃಷಿಕರ ನೀರಾವರಿ ಪಂಪುಸೆಟ್ಟುಗಳಿಗೆ ಹಾನಿ ಉಂಟಾಗುವ ಸಂಭವವಿರುತ್ತದೆ. ಪ್ರಸ್ತುತ ಮಂಡಳಿಯು 14 ಗಂಟೆಗಳ ಅವಧಿಗೆ 3 ಫೇಸ್‌ನಲ್ಲಿ ವಿದ್ಯುತ್ ಪೂರೈಕೆಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡುತ್ತಿದೆ. ಈ ಅವಧಿಯಲ್ಲಿ ನೀರಾವರಿ ಪಂಪುಸೆಟ್ಟುಗಳನ್ನು ಬಳಸಬಹುದಾಗಿದೆ. ಅಲ್ಲದೇ ಸಂಜೆ 6 ರಿಂದ 10 ಗಂಟೆಯವರೆಗೆ ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜನ್ನು ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸ್ಥೆ ಮಾಡುತ್ತಿದೆ. ಈ ಕ್ರಮದಿಂದ ಗೃಹ ಬಳಕೆ, ವಾಣಿಜ್ಯ ಮತ್ತು ಬೀದಿ ದೀಪಗಳಿಗೆ ವಿದ್ಯುತನ್ನು ಬಳಸಬಹುದಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ದಿನಮಹಿ 6 ಗಂಟೆಗಳ ಅವಧಿಗೆ ನಿಯಮಿತ ಲೋಡ್ ಶೆಡ್ಡಿಂಗನ್ನು ನಿರ್ವಹಿಸಲಾಗುತ್ತಿದೆ. ರಾಜ್ಯಾದಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ಈ ರೀತಿಯಲ್ಲಿ ನಿರ್ವಹಿಸಲಾಗುತ್ತಿದೆ. ಪ್ರಸ್ತುತ ರಾಜ್ಯದ ಅನಿರ್ಬಂಧಿತ ವಿದ್ಯುತ್ ಬೇಡಿಕೆಯು ಸುಮಾರು 27,000 ದಶಲಕ್ಷ ಯೂನಿಟ್‌ಗಳಾಗಿದ್ದು, ಎಲ್ಲಾ ಮೂಲಗಳಿಂದ ಲಭ್ಯವಾಗುವ ಒಟ್ಟು ವಿದ್ಯುತ್ ಪ್ರಮಾಣವು 22,000 ದಶಲಕ್ಷ ಯೂನಿಟ್ ಗಳಾಗಿದೆ. ಹೀಗಾಗಿ ರಾಜ್ಯವು ಕೊರತೆಯನ್ನು ಪ್ರಸಕ್ತ ವರ್ಷದಲ್ಲಿ ಅನುಭವಿಸುತ್ತಿದೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ನಿಯಮಿತ ಲೋಡ್ ಶೆಡ್ಡಿಂಗನ್ನು ಮುಂದುವರಿಸುವುದು ಅನಿವಾರ್ಯವಾಗಿದೆ. ಮಳೆಗಾಲದಲ್ಲಿ ರಾಜ್ಯದ ವಿದ್ಯುತ್ ಬಳಕೆ ಕಡಿಮೆಯಾದ್ದರಿಂದ ಜುಲೈ 98ರಿಂದ ಪಟ್ಟಣ ಪ್ರದೇಶಗಳಲ್ಲಿ ನಿರ್ವಹಿಸಲಾಗುತ್ತಿದ್ದ ನಿಯಮಿತ ಲೋಡ್ ಶೆಡ್ಡಿಂಗನ್ನು ರದ್ದುಪಡಿಸಲಾಯಿತು. ರಾಜ್ಯವು ಎದುರಿಸುತ್ತಿರುವ ವಿದ್ಯುತ್ ಕೊರತೆಯ ಪರಿಸ್ಥಿತಿ ಮತ್ತು ಮುಂಬರುವ ಬೇಸಿಗೆ ತಿಂಗಳುಗಳಲ್ಲಿ ರಾಜ್ಯದ ವಿದ್ಯುತ್ ಬಳಕೆಯು ಹೆಚ್ಚಳಗೊಳ್ಳುವುದರಿಂದ ನಗರ ಪ್ರದೇಶಗಳಲ್ಲಿಯೂ ಸಹ ನಿಯಮಿತ ಲೋಡ್ ಶೆಡ್ಡಿಂಗನ್ನು ಪುನಃ ಜಾರಿಗೊಳಿಸುವಂತಹ ಸಂಭವವಿರುತ್ತದೆ.

ರಾಜ್ಯ ಆಹಾರ ನಿಗಮದಲ್ಲಿ ಒಟ್ಟಾರೆ ನಡೆದ ಅವ್ಯವಹಾರ

2341 -ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯ ಆಹಾರ ನಿಗಮದಲ್ಲಿ ಒಟ್ಟಾರೆ ನಡೆದ ಅವ್ಯವಹಾರದ ಬಗ್ಗೆ ತನಿಖೆ ನಡೆದಿದೆಯೇ ಹಾಗಾದರೆ ಅದರ ಒಟ್ಟು ಮೊತ್ತವೆಷ್ಟು?*

ಆ) *ನಿಗಮದ ಜೊತೆ, ನಿಗಮ ಆರಂಭದಿಂದ ಯಾವ ಯಾವ ಸಂಸ್ಥೆಗಳು ವ್ಯವಹರಿಸಿದೆ. ಈ*

ಸಂಸ್ಥೆಗಳ ಜೊತೆ ಎಷ್ಟು ಸಮಯದಿಂದ ಲೆಕ್ಕ ಪತ್ರಗಳ ತಾಳೆ ನೋಡಲು ಬಾಕಿ ಇದೆ. ಯಾವ ಕಾರಣಕ್ಕಾಗಿ ಬಾಕಿ ಇದೆ?

ಇ) ಖಾಸಗಿ ಅಕ್ಕಿ ಗಿರಣಿ ಮಾಲೀಕರಿಂದ ನಿಗಮಕ್ಕೆ ಬರಬೇಕಾಗಿರುವ ಬಾಕಿ ಹಣದ ಮೊತ್ತವೆಷ್ಟು? ಇದರ ವಸೂಲಾತಿಗಾಗಿ ನಿಗಮ ತೆಗೆದುಕೊಂಡ ಕ್ರಮಗಳಾವುವು?

ಶ್ರೀ ಜಿ. ಬಸವಣ್ಣೆಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ನಿಗಮವು ನೀಡಿದ ಮಾಹಿತಿ ಪ್ರಕಾರ ರಾಜ್ಯ ಆಹಾರ ನಿಗಮದಲ್ಲಿ ನಡೆದ ಎಲ್ಲಾ ಅವ್ಯವಹಾರಗಳ ಬಗ್ಗೆ ಎಲ್ಲಾ ಪ್ರಕರಣಗಳನ್ನು ತನಿಖೆಗೆ ಒಳಪಡಿಸಲಾಗಿದೆ. ಹಾಲಿ ಇರುವ ಎಲ್ಲ ಅವ್ಯವ್ಯಹಾರಗಳಿಗೆ ಸಂಬಂಧಿಸಿದ ಒಟ್ಟು ಮೊತ್ತ ರೂ. 146.98 ಲಕ್ಷಗಳು.

ಆ) ಆರಂಭದಿಂದ ನಿಗಮದ ಜೊತೆ ಸರ್ಕಾರಿ ಸಂಸ್ಥೆಗಳು ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರಿ ಸಂಘಗಳು, ಭಾರತೀಯ ಆಹಾರ ನಿಗಮ, ಸಕ್ಕರೆ ಗಿರಣಿಗಳು, ಖಾಸಗಿ ಅಕ್ಕಿ ಗಿರಣಿಗಳು, ಸಿಮೆಂಟ್ ಗಿರಣಿಗಳು ಹಾಗೂ ಖಾಸಗಿ ಸಂಸ್ಥೆ ಹಾಗೂ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಉದ್ಯಮಿಗಳೊಂದಿಗೆ ವ್ಯವಹರಿಸಿರುತ್ತದೆ.

1978-79 ರಿಂದ 1981-82ರವರೆಗೆ ನಿಗಮದ ಲೆಕ್ಕಗಳನ್ನು ಕ್ರೋಢೀಕರಿಸುವ ಕೆಲಸವನ್ನು ಖಾಸಗಿ ಸಂಸ್ಥೆಗೆ ವಹಿಸಿದ್ದುದರಿಂದ ಅವರುಗಳು ಸಂಬಂಧಪಟ್ಟ ಪಟ್ಟಿಗಳನ್ನು ಕೊಡದೆ ಪಟ್ಟಿಗಳ ತಯಾರಿಕೆ ಮತ್ತು ತಾಳೆ ಮಾಡುವ ಕೆಲಸ 1996ರವರೆಗೆ ಸ್ಥಗಿತಗೊಂಡಿತ್ತು. ಈಗ ನಿಗಮದಲ್ಲಿ ಈ ಕೆಲಸವನ್ನು ಆದ್ಯತೆಯ ಮೇರೆಗೆ ಕೈಗೆತ್ತಿಗೊಳ್ಳಲಾಗಿದೆ.

ಇ) 21 ಖಾಸಗಿ ಅಕ್ಕಿ ಗಿರಣಿ ಮಾಲೀಕರಿಂದ ನಿಗಮಕ್ಕೆ ಒಟ್ಟು ಮೊತ್ತ ರೂ. 2,88,17,150.75 ಬರಬೇಕಾಗಿರುತ್ತದೆ. ಈ ಹಣದ ವಸೂಲಾತಿಗಾಗಿ ಸಂಬಂಧಪಟ್ಟ ಗಿರಣಿ ಮಾಲೀಕರ ಜೊತೆ ಮಾಡಿಕೊಂಡ ಕರಾರುಗಳ ಪ್ರಕಾರ ಕಾನೂನು ಕ್ರಮ ಜರುಗಿಸಲಾಗಿದೆ.

ಪೋಲೀಸ್ ಸಿಬ್ಬಂದಿ ಹೆಚ್ಚಿಸುವುದು

2342 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೋಲೀಸ್ ಠಾಣೆಗಳಲ್ಲಿ ಸಿಬ್ಬಂದಿ ಸಂಖ್ಯೆಯನ್ನು ನಿಗದಿಪಡಿಸುವಲ್ಲಿ ಜನ ಸಂಖ್ಯೆಯ ಅನುಪಾತದ ಆಧಾರವಲ್ಲದೆ ಆ ಠಾಣಾ ವ್ಯಾಪ್ತಿಯ ವಾಹನ ದಟ್ಟಣೆ ಮತ್ತು ಅಪರಾಧಗಳ ಸಂಖ್ಯೆಯನ್ನು ಪರಿಗಣಿಸಲಾಗುವುದೇ?

ಆ) ಶಿವಮೊಗ್ಗ ಜಿಲ್ಲೆಯ ಠಾಣೆಗಳಲ್ಲಿ ಈ ಮಾನದಂಡವನ್ನು ಅಳವಡಿಸಲಾಗಿದೆಯೇ?

ಇ) ರಾಜ್ಯದಲ್ಲಿ ಹೊಸ ಪೋಲೀಸ್ ಠಾಣೆಗಳನ್ನು ರಚಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ? ಹಾಗಿದ್ದಲ್ಲಿ ಅವು ಯಾವುವು?